**OS. No. 275/2015** **PW – 1**

ಪ್ರಮಾಣೀಕರಿಸಲಾದ ದಿನಾಂಕಃ **10.06.2026.**

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. **GD** ವಕೀಲರಿಂದಃ

1. ನಾನು ಪಿಯುಸಿವರಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಮ್ಮ ತಂದೆಗೆ ಇಬ್ಬರು ಮಕ್ಕಳು. ಹೆಣ್ಣು ಮಕ್ಕಳು ಇರುವುದಿಲ್ಲ. ಪುಟ್ಟಬಸವಯ್ಯರವರ ತಂದೆಯ ಹೆಸರು ಕೊಟ್ಟೂರಯ್ಯ. ನನ್ನ ತಂದೆ 2015 ರಲ್ಲಿ ಮೃತಪಟ್ಟಿರುತ್ತಾರೆ. ದಾವಾ ಸ್ವತ್ತು ಈಗಲೂ ಸಹ ಪುಟ್ಟಬಸವಯ್ಯರವರ ಹೆಸರಿನಲ್ಲಿ ಇದೆ ಎಂದರೆ ಸರಿ. ಪುಟ್ಟಬಸವಯ್ಯರವರು ಮರಣ ನಂತರ ನಾನಾಗಲೀ ಅಥವಾ ನನ್ನ ತಮ್ಮ ಅಥವಾ ತಾಯಿ ಆಗಲೀ ಖಾತೆ ಮಾಡಿಕೊಳ್ಳಲು ಪ್ರಯತ್ನ ಪಟ್ಟಿರುತ್ತೇವೆ, ಆ ರೀತಿ ಪ್ರಯತ್ನದಲ್ಲಿ ಪುರಸಭೆಗೆ ಖಾತೆ ಮಾಡಿಸಿಕೊಳ್ಳಲು ಅರ್ಜಿ ಕೊಟ್ಟಿರುವುದಿಲ್ಲ. ಪುಟ್ಟಬಸವಯ್ಯನವರ ಹೆಸರಿಗೆ ಇ-ಖಾತೆ ಮಾಡಿಸಿರುವುದಿಲ್ಲ. ಇ-ಖಾತೆ ಮಾಡಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಪುಟ್ಟಬಸವಯ್ಯರವರಿಗೆ ದಾವಾ ಸ್ವತ್ತು ಪಿತ್ರಾರ್ಜಿತವಾಗಿ ಬಂದಿರುತ್ತದೆ. ಕೊಟ್ಟೂರಯ್ಯನವರ ಹೆಸರಿನಲ್ಲಿರುವ ಯಾವುದೇ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಹಾಜರು ಪಡಿಸಲು ತೊಂದರೆ ಇಲ್ಲ.

2. ನನ್ನ ಪತ್ನಿ 2013 ರಿಂದ 2018 ರಲ್ಲಿ ಪುರಸಭೆಯಲ್ಲಿ ಅಧ್ಯಕ್ಷರಾಗಿದ್ದರು. ದಾವಾ ಸ್ವತ್ತಿನ ಚಕ್ಕುಬಂದಿ ತೋರಿಸುವ ಮೂಲ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅಂತಹ ಯಾವುದೇ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ.4 ರ ಪ್ರಕಾರ ಶೇಖರಯ್ಯ ಮತ್ತು ಚಿಕ್ಕಮ್ಮ ಎನ್ನುವವರು ತಿಪಟೂರು ತಾಲ್ಲೂಕು , ಬೆನ್ನನಾಯಕನಹಳ್ಳಿ ವಾಸಿಗಳು ಎಂದರೆ ನನಗೆ ಗೊತ್ತಿಲ್ಲ. ಸದರಿಯವರುಗಳಿಗೆ ದಬ್ಬೆಘಟ್ಟದಲ್ಲಿ ಮನೆ ಅಥವಾ ಜಮೀನು ಇರುವ ವಿಚಾರ ನನಗೆ ಗೊತ್ತಿಲ್ಲ. ನನಗೆ ಈಗ 55 ವರ್ಷ ವಯಸ್ಸು. ಪುಟ್ಟಬಸಯ್ಯನವರು ಎಲ್ಲಾ ವ್ಯವಹರಣೆಗಳನ್ನು ನಮ್ಮ ಮೂಲಕ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅವರೆ ನೇರವಾಗಿ ವ್ಯವಹರಿಸುತ್ತಿದ್ದರು. ಶೇಖರಯ್ಯ ಮತ್ತು ಚಿಕ್ಕಮ್ಮ ಎನ್ನುವವರು ದಬ್ಬೆಘಟ್ಟದಲ್ಲಿ ಯಾವತ್ತಿಗೂ ವಾಸವಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ದಬ್ಬೆಘಟ್ಟದಲ್ಲಿಯೇ ಹುಟ್ಟಿ ಬೆಳೆದಿರುತ್ತೇನೆ ಎಂದರೆ ಸರಿ. ಸದರಿ ಶೇಖರಯ್ಯ ಮತ್ತು ಚಿಕ್ಕಮ್ಮ ರವರು ದಬ್ಬೆಘಟ್ಟದಲ್ಲಿ ಯಾವತ್ತಿಗೂ ವಾಸವಿರಲಿಲ್ಲ ನನ್ನ ತಂದೆ ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ನೀಡಿ ಅ.ದಾ.ಸಂ. 372/2013 ರಲ್ಲಿ ಡಿಕ್ರಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ ನಿಪಿ.8 ಜೋಗಿಹಳ್ಳಿ ಪಂಚಾಯಿತಿಯವರು ನೀಡಿರುವ ದಾಖಲೆ ಎಂದರೆ ಸರಿ. ಜೋಗಿಹಳ್ಳಿ ಪಂಚಾಯಿತಿಯಲ್ಲಿ ದಾವಾ ಸ್ವತ್ತಿನ ಖಾತೆ

ಇತ್ತು ಎಂದು ತೋರಿಸುವ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ.1 ರಿಂದ 3 ದಾಖಲೆಗಳು ಪುರಸಭೆ ,ಚಿಕ್ಕನಾಯಕನಹಳ್ಳಿ ರವರು ನೀಡಿರುವ ದಾಖಲೆ ಎಂದರೆ ಸರಿ, ಪಂಚಾಯಿತಿ ದಾಖಲೆಯನ್ನು ಸಹ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ಪಂಚಾಯಿತಿ ದಾಖಲೆಗಳಲ್ಲಿ ಪುಟ್ಟಬಸವಯ್ಯರವರಿಗೆ ಯಾವ ದಾಖಲೆಗಳ ಆಧಾರದ ಮೇಲೆ ದಾವಾ ಸ್ವತ್ತು ಬಂತು ಎಂದು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪುರಸಭೆಗೆ ತೆರಿಗೆ ಪಾವತಿ ಮಾಡಿರುವ ಯಾವುದೇ ದಾಖಲೆಯನ್ನು ಇಲ್ಲಿಯವರೆಗೆ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

3. ನಿಪಿ.9 ಮತ್ತು 10 ರಲ್ಲಿ ಶೀಟನ್ನು ಚಿಕ್ಕಣ್ಣರವರು ಮನೆಯ ಗೋಡೆಗೆ ಲಗತ್ತಾಗಿ ಅಳವಡಿಸಲಾಗಿರುತ್ತದೆ. ಸದರಿ ಶೆಡ್ಡನ್ನು ನಿರ್ಮಾಣ ಮಾಡಲು ಯಾವುದೇ ಪರವಾನಿಗೆಯನ್ನು ಪಡೆದಿರುವುದಿಲ್ಲ.ಅದನ್ನು ದನಗಳನ್ನು ಕಟ್ಟುವ ಸಲುವಾಗಿ ನಿರ್ಮಾಣ ಮಾಡಲಾಗಿರುತ್ತದೆ. ಆ ರೀತಿ ಚಿಕ್ಕಣ್ಣರವರ ಮನೆಗೆ ಲಗತ್ತಾಗಿ ಶೀಟನ್ನು ಅಳವಡಿಸುತ್ತೇನೆ ಎಂದು ಅವರಿಂದ ಅನುಮತಿ ಪತ್ರವನ್ನು ಬರೆಸಿಕೊಂಡಿರುವುದಿಲ್ಲ ನಿಪಿ.9 ಮತ್ತು 10 ನ್ನು ಯಾರು ತೆಗೆದಿರುತ್ತಾರೆ ಅದನ್ನು ಯಾರು ಮುದ್ರಿತಗೊಳಿಸಿರುತ್ತಾರೆ ಎಂದು ರಶೀದಿಯನ್ನು ನೀಡಿಲ್ಲ. ನಾನು ಹೇಳುವಂತಹ ದಾವಾ ಸ್ವತ್ತಿನ ಉತ್ತರ ಮತ್ತು ದಕ್ಷಿಣದಲ್ಲಿನ ಯಾವುದೇ ದಾರಿ ನಿಪಿ.9 ಮತ್ತು 10 ರಲ್ಲಿ ಕಾಣುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ನಿಪಿ.9 ಮತ್ತು 10 ಛಾಯ ಚಿತ್ರಗಳಿಗೂ ನಿಪಿ1 ರಿಂದ 3 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

4. ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ನಮೂದು ಮಾಡಿರುವ ಬಸವಯ್ಯ 1 ನೇ ಪ್ರತಿವಾದಿಯ ಚಿಕ್ಕಪ್ಪ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಶ್ಚಿಮದಲ್ಲಿ ಇರುವ ಬಸವಯ್ಯ ರವರ ಮನೆ 1 ನೇ ಪ್ರತಿವಾದಿಯ ಪೂರ್ವಜರ ಮನೆ ಎಂದಗೆ ಗೊತ್ತಿಲ್ಲ. ಸದರಿ ಬಸವಯ್ಯರವರ ಪೂರ್ವ ಮತ್ತು ಉತ್ತರದಲ್ಲಿರುವ ಖಾಲಿ ಜಾಗವನ್ನು ಅವರ ಪೂರ್ವಿಕರೆ ಸ್ವಾಧೀನದಲ್ಲಿ ಇದ್ದುಕೊಂಡೆ ಅನುಭವಿಸಿಕೊಂಡುಬರುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ 18.06.1984 ರಲ್ಲಿ 40 *30 ಜಾಗವನ್ನು ಸರ್ಕಾರ ಮಂಜೂರಾತಿ ಮಾಡಿ ಹಕ್ಕುಪತ್ರ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಂದಿನಿಂದಲೂ 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ದಾಖಲಾಗಿ ಅವರೇ ಅದನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಬಸವಯ್ಯನವರು ಮೃತಪಟ್ಟ ನಂತರ ಸದರಿ ಜಾಗ 2 ನೇ ಪ್ರತಿವಾದಿ ಆತನ ತಂಗಿ ಲತಾ ರವರ ಹೆಸರಿಗೆ ಇ- ಖಾತೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ಮೂಲ ದಾಖಲೆಯನ್ನು ಹಾಜರುಪಡಿಸದ ನನ್ನ ಪತ್ನಿ ಪುರಸಭೆ ಸದಸ್ಯರಾಗಿದ್ದಾಗ

ಕೇವಲ ಕಂದಾಯ ದಾಖಲೆಗಳನ್ನು ಸೃಷ್ಠಿಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಯಾವತ್ತಿಗೂ ಸಹ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ಸ್ವಾಧೀನದಲ್ಲಿ ಇಲ್ಲದೇ ಇರುವ ಕಾರಣವೇ ಇಲ್ಲಿಯವರೆಗೂ ಇ-ಖಾತೆಯನ್ನು ಪಡೆದುಕೊಳ್ಳಲು ಸಾಧ್ಯವಾಗಿಲ್ಲ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಪವತಿ ಖಾತೆಯನ್ನು ಇಲ್ಲಿಯವರೆಗೂ ಮಾಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ, ಅದೇ ಉದ್ದೇಶಕ್ಕೆ ಇಲ್ಲಿಯವರೆಗೂ ಸಹ ಸದರಿ ಜಾಗಕ್ಕೆ ಕಂದಾಯವನ್ನು ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ.4 ನ್ನು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಹಕ್ಕನ್ನು ಸೃಷ್ಠಿಸುವ ಸಲುವಾಗಿ ನ್ಯಾಯಾಲಯಕ್ಕೆ ಸುಳ್ಳು ಅಂಶಗಳನ್ನು ನೀಡಿ ಡಿಕ್ರಿ ಪಡೆಯಲಾಗಿದೆ ಎಂದರೆ ಸರಿಯಲ್ಲ ನಮಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಪ್ರತಿವಾದಿಯವರ ನಿವೇಶನವನ್ನು ಲಪಟಾಯಿಸುವ ಉದ್ದೇಶದಿಂದ ಸೃಷ್ಠಿಮಾಡಿದ ದಾಖಲೆಗಳ ಆಧಾರದ ಸುಳ್ಳು ದಾವೆಯನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನಾಗಲೀ ಅಥವಾ ನನ್ನ ಕುಟುಂಬದವರಾಗಲೀ ಯಾವತ್ತಿಗೂ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚಿಸಿದೆ)

ಓ.ಹೇ.ಕೇ.ಸರಿ ಇದೆ

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು, ಚಿ.ನಾ.ಹಳ್ಳಿ